# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 439 |
| ಸದಸ್ಯರ ಹೆಸರು | : | ಶ್ರೀ ಆಯನೂರು ಮಂಜುನಾಥ್ (ಪದವೀಧರ ಕ್ಷೇತ್ರ) |
| ಉತ್ತರಿಸ ಬೇಕಾದ ದಿನಾಂಕ | : | 19.07.2019 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಉಪ ಮುಖ್ಯಮಂತ್ರಿಯವರು. |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ (ರಿ) ನಲ್ಲಿ ಅವ್ಯವಹಾರಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ. ಕೈಗೊಂಡ ಕ್ರಮಗಳೇನು; (ವಿವರ ನೀಡುವುದು) | ಹೌದು.<br>ಸಂಘದಲ್ಲಿನ ಅಕ್ರಮಗಳ ಬಗ್ಗೆ ತನಿಖೆ ನಡೆಸಲು ಸಹಕಾರ ಸಂಘಗಳ ನಿಬಂಧಕರು, ಸಹಕಾರ ಇಲಾಖೆ, ರವರಿಗೆ ದಿನಾಂಕ:28.05.2019 ರಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಪತ್ರವನ್ನು ಬರೆದು ತನಿಖೆ ಕೈಗೊಂಡಿದ್ದಲ್ಲಿ ತನಿಖಾ ವರದಿಯನ್ನು ಸಲ್ಲಿಸುವಂತೆ. ಕೋರಲಾಗಿರುತ್ತದೆ. ಮುಂದುವರೆದು, ದಿನಾಂಕ:29.06.2019 ರ ಪತ್ರದಲ್ಲಿ ಸಂಘದಲ್ಲಿನ ಅಕ್ರಮಗಳ ಬಗ್ಗೆ ತನಿಖೆ ನಡೆಸಲು ಆಡಳಿತಾಧಿಕಾರಿಯವರನ್ನು ನೇಮಿಸುವಂತೆ ಕೋರಲಾಗಿರುತ್ತದೆ. ವರದಿ ಬಂದ ನಂತರ ಸದರಿ ಸಂಘದವರ ವಿರುದ್ಧ ಕ್ರಮಕೈಗೊಳ್ಳಲಾಗುವುದು. |
| ಆ | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನೌಕರರಿಗೆ ನಿವೇಶನ ಹಂಚಿಕೆ ಮಾಡುವ ಉದ್ದೇಶಕ್ಕಾಗಿ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್‌ಗೆ ಭೂಮಿಯನ್ನು ಮಂಜೂರು ಮಾಡಲಾಗಿದೆಯೇ; (ವಿವರ ನೀಡುವುದು) | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನೌಕರರಿಗೆ ನಿವೇಶನ ಹಂಚಿಕೆ ಮಾಡುವ ಉದ್ದೇಶಕ್ಕಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ (ರಿ) ರವರಿಗೆ ಸಗಟು ಹಂಚಿಕೆ ಮಾಡಲಾಗಿರುತ್ತದೆ. **ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ** |
| ಇ | ಇಲ್ಲವಾದಲ್ಲಿ, ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ ನೌಕರರಿಗೆ ಮತ್ತು ಇತರರಿಗೆ ನಿವೇಶನ ಹಂಚಿಕೆ ಮಾಡಿರುವ ಸರ್ಕಾರಿ ಭೂಮಿ ಯಾವುದು? (ಸಂಪೂರ್ಣ ಮಾಹಿತಿ ನೀಡುವುದು) | ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ದೊಡ್ಡಕಲ್ಲಸಂದ್ರ ಗ್ರಾಮದ ಸರ್ವೆ ನಂ.15, 16 ಮತ್ತು 17 ಸರ್ಕಾರಿ ಗೋಮಾಳ ಜಮೀನಾಗಿದ್ದು, ಪ್ರಾಧಿಕಾರದಿಂದ ಭೂಸ್ವಾಧೀನ ಪ್ರಕ್ರಿಯೇ ಪೂರ್ಣಗೊಂಡ ನಂತರ ಒಟ್ಟು 27 ಎಕರೆ 15 ½ ಗುಂಟೆ ಜಮೀನನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ (ರಿ) ರವರಿಗೆ ಸಗಟು ಹಂಚಿಕೆ ಮಾಡಲಾಗಿದೆ.<br><br>ಬೆಂಗಳೂರು. ದಕ್ಷಿಣ ತಾಲ್ಲೂಕ ತಹಶೀಲ್ದಾರ್ ರವರಿಗೆ ಭೂಪರಿಹಾರದ ಹಣ ಪಾವತಿ ಮಾಡಿರುವ ವಿವರ ಕೆಳಕಂಡಂತಿದೆ:- |

| ಕ್ರಮ ಸಂಖ್ಯೆ | ಸರ್ವೆ ನಂಬರ್ | ಭೂಪರಿಹಾರದ ಮೊತ್ತ |
|---|---|---|
| 1 | 15 | 16,49,442/- |
| 2 | 16 | 8,66,916/- |
| 3 | 17 | 36,40,279/- |

| | | |
|---|---|---|
| | | ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಲಿಂಗಧೀರನಹಳ್ಳಿ ಗ್ರಾಮದ ಸರ್ವೆ ನಂ.6 ರ ಒಟ್ಟು 15 ಎಕರೆ 1 ಗುಂಟೆ ಜಮೀನನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ (ರಿ) ರವರಿಗೆ ಸಗಟು ಹಂಚಿಕೆ ಮಾಡಲಾಗಿದೆ. ಬೆಂಗಳೂರು ದಕ್ಷಿಣ ತಾಲ್ಲೂಕ ತಹಶೀಲ್ದಾರ್ ರವರಿಗೆ ಭೂಪರಿಹಾರದ ಮೊತ್ತ ರೂ.75,37,680/-ಗಳನ್ನು ಪಾವತಿ ಮಾಡಲಾಗಿದೆ. |

ಸಂ: ನಅಇ 64 ಬೆಂಅಸೇ 2019

(ಡಾ॥ ಜಿ.ಪರಮೇಶ್ವರ)
ಉಪ ಮುಖ್ಯಮಂತ್ರಿ

ಅನುಬಂಧ-I

## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನೌಕರರು ಕ್ಷೇಮಾಭಿವೃದ್ಧಿ ಸಂಘಕ್ಕೆ ಸಗಟು ಹಂಚಿಕೆಯಡಿ ನೀಡಲಾಗಿರುವ ಒಟ್ಟು ಜಮೀನು ವಿವರ

| ಕ್ರಮ ಸಂಖ್ಯೆ | ಸರ್ವೆ ನಂ | ಗ್ರಾಮ | ವಿಸ್ತೀರ್ಣ | | ನೋಂದಣಿ ವಿವರ | | ಷರಾ |
|---|---|---|---|---|---|---|---|
| | | | ಎಕರೆ | ಗುಂಟೆ | ಕ್ರಯಪತ್ರ ದಿನಾಂಕ | ಸ್ವಾಧೀನ ಪತ್ರ ದಿನಾಂಕ | |
| 1 | 15, 16 ಮತ್ತು 17 | ದೊಡ್ಡಕಲ್ಲಸಂದ್ರ | 27 | 15 1/2 | 09.11.2006 | 09.11.2006 | ವಾಸ್ತವವಾಗಿ ಸರ್ವೆ ನಂ. 15, 16 ಮತ್ತು 17 ರ ಜಮೀನು 27 ಎಕರೆ 15 1/2 ಗುಂಟೆ ಮಾತ್ರ ಎಂದು ದಿನಾಂಕ: 12.06.2013 ರಂದು ತಿದ್ದುಪಡಿ ಪತ್ರ ನೋಂದಾಯಿಸಲಾಗಿದೆ. |
| 2 | 06 (ಭಾಗ) | ಲಿಂಗಧೀರನಹಳ್ಳಿ | 07 | 00 | 13.06.2007 | 13.06.2007 | |
| 3 | 06 (ಭಾಗ) ಮತ್ತು 07 (ಭಾಗ) | ಲಿಂಗಧೀರನಹಳ್ಳಿ | 05 | 00 | 14.11.2007 | 14.11.2007 | |
| 4 | 06 (ಭಾಗ) ಮತ್ತು 07 (ಭಾಗ) | ಲಿಂಗಧೀರನಹಳ್ಳಿ | 03 | 01 | 28.06.2011 | 28.06.2011 | |
| | | **ಒಟ್ಟು** | **42** | **16 1/2** | | | |